ತನ್ಮೂಲಕ ರೈತ ಸದಸ್ಯರು ಆ ಸಾಲಗಳನ್ನು ಮೂರು ವಾರ್ಷಿಕ ಸಮ ಕಂತುಗಳಲ್ಲಿ ಮರು ಪಾವತಿ ಮಾಡಬಹುದಾದ ಸೌಲಭ್ಯಗಳನ್ನು ಕಲ್ಪಿಸಲಾಗುವುದು.

ಆ) ಅಂತಹ ಪ್ರದೇಶಗಳಲ್ಲಿನ ರೈತರ ಬೆಳೆ ಇಳುವರಿ 6 ಆಣೆಗಿಂತ ಕಡಿಮೆ ಎಂಬುದಾಗಿ ಕಂದಾಯ ಇಲಾಖೆಯು ಆಣೆವಾರಿಯನ್ನು ಘೋಷಿಸಿದ್ದಲ್ಲ, ಸಹಕಾರ ಸಂಘಗಳಿಂದ ರೈತರು ಪಡೆದುಕೊಂಡಂತಹ ಅಲ್ಪಾವಧಿ ಬೆಳೆ ಸಾಲಗಳನ್ನು ನಬಾರ್ಡ್ ವಿಧಿಸಿರುವ ಷರತ್ತುಗಳ ರೀತ್ಯಾ ಮಧ್ಯಮಾವಧಿ ಸಾಲಗಳನ್ನಾಗಿ ಪರಿವರ್ತಿಸಲಾಗುವುದು.

ಪ್ರವಾಹ ಪೀಡಿತ ಪ್ರದೇಶಗಳಲ್ಲಿ ಬಡ್ಡಿ ರಿಯಾಯಿತಿ.

925 - ಶ್ರೀ ಅಲ್ಲಂ ವೀರಭದ್ರಪ್ಪ (ಕೆರೆಗೊಡು): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:

ಅ) ಪ್ರವಾಹ ಪೀಡಿತ ಪ್ರದೇಶಗಳಲ್ಲಿ ಸಾಕಷ್ಟು ಬೆಳೆಗಳು ಹಾನಿಯಾಗಿರುವುದು ನಿಜವೇ?

ಆ) ಹಾಗಿದ್ದಲ್ಲಿ ಆ ಪ್ರದೇಶಗಳ ರೈತರು ಕೊಡಬೇಕಾದ ಭೂ ಕಂದಾಯ ತೆರಿಗೆ ಹಾಗೂಸಹಕಾರ ಸಂಘಗಳ ಸಾಲದ ಹಣಕ್ಕೆ ಸರ್ಕಾರವು ಬಡ್ಡಿ ರಿಯಾಯಿತಿ ನೀಡುವುದೇ?

ಶ್ರೀ ಎಂ. ರಾಜಶೇಖರ ಮೂರ್ತಿ (ಕಂದಾಯ ಸಚಿವರು):

ಅ) ಹೌದು.

ಆ) ಪ್ರವಾಹ ಪೀಡಿತ ಜಿಲ್ಲೆಗಳಲ್ಲಿ ಭೂ ಕಂದಾಯ ತೆರಿಗೆ ಮನ್ನಾ ಮಾಡಲು, ಭೂ ಕಂದಾಯ ಕಾಯಿದೆ 1964ರ ಕಾಲಂ 194 ಮತ್ತು ನಿಯಮ 147 ರ ಪ್ರಕಾರ ಜಿಲ್ಲೆಯ ಜಿಲ್ಲಾಧಿಕಾರಿಗಳು, ಬೆಳೆ ಆಣೆವಾರಿ ನಿರ್ಧರಿಸಿ ಕ್ರಮ ಕೈಗೊಳ್ಳಲು ಸರ್ಕಾರವು ಆದೇಶಿಸಿದೆ.

ಆದರೆ ಸಹಕಾರ ಸಂಘದಿಂದ ರೈತರು ಪಡೆದಿರುವ ಸಾಲದ ಮೇಲಿರುವ ಬಡ್ಡಿಯನ್ನು ರಿಯಾಯಿತಿ ಮಾಡುವ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿಲ್ಲ.

ದಕ್ಷಿಣ ಕನ್ನಡದ ಭೂ ನ್ಯಾಯ ಮಂಡಳಿ ಪ್ರಕರಣಗಳು

1039 - ಶ್ರೀ ಬಿ.ಎಂ. ಇದಿನಬ್ಬ (ಉಳ್ಳಾಲ): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಭೂ ನ್ಯಾಯ ಮಂಡಲಿಗಳಲ್ಲಿ ಇತ್ಯರ್ಥಕ್ಕೊಳಗಾಗಿರುವ ಪ್ರಕರಣಗಳೆಷ್ಟು?

ಆ) ಜಿಲ್ಲೆಯ ಯಾವ ಯಾವ ತಾಲ್ಲೂಕಿನಲ್ಲಿ ಎಷ್ಟಿವೆ (ವಿವರ ನೀಡುವುದು)

ಇ) ಈ ಅರ್ಜಿಗಳ ಇತ್ಯರ್ಥಕ್ಕೆ ಇನ್ನೆಷ್ಟು ಕಾಲ ಬೇಕಾಗಬಹುದು? ಎಲ್ಲೆಲ್ಲಿ ಭೂ ನ್ಯಾಯ ಮಂಡಳಿಗಳಿವೆ? ಅವ್ಯವಹಾರ ನಡೆಸುವ ಭೂ ನ್ಯಾಯ ಮಂಡಳಿಗಳ ಬಗ್ಗೆ ದೂರುಗಳಿವೆಯೇ?

ಈ) ಭೂ ನ್ಯಾಯ ಮಂಡಳಿಗಳಿಗೆ ಅತ್ಯಂತ ಅರ್ಹರನ್ನು ನೇಮಕ ಮಾಡಲಾಗುವುದೇ?

ಶ್ರೀ ಎಂ. ರಾಜಶೇಖರ ಮೂರ್ತಿ (ಕಂದಾಯ ಸಚಿವರು):

ಅ) 3414 ಪ್ರಕರಣಗಳು